# ಕನ್ನಡ ಪೋಸ್ಟ್

ಸಂಪಾದಕ : ಮಂಜು ಬನವಾಸೆ | KANNADA POST | ಇದು ಸುದ್ದಿ ವಿಳಾಸ | ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.02 | Issue. 46 | Pages. 2 | Date: 15-01-2026, THURSDAY | RNI NO: KARKAN/2024/89601 | Kannada Daily

ಸಂಪುಟ : 02 – ಸಂಚಿಕೆ : 46 – ಪುಟಗಳು : 2 | 15-01-2026 | ಗುರುವಾರ | Ph: 8762954248 | ದರ : ₹1


# ಅಭಿವೃದ್ಧಿ ಮಾಹಿತಿ ಶೀಘ್ರ ಬಹಿರಂಗ: ಸಿಮೆಂಟ್ ಮಂಜು

## 2.10 ಲಕ್ಷ ಜನರ ಆಶೀರ್ವಾದವಿದೆ | ವಿರೋಧಿಗಳಿಗೆ ತೀಕ್ಷ್ಣ ಪ್ರತಿಕ್ರಿಯೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಸಕಲೇಶಪುರ: ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಸರ್ಕಾರದಿಂದ ತಂದಿರುವ ಅನುದಾನವನ್ನು ಅಂಕಿ-ಅಂಶಗಳೊಂದಿಗೆ ಶೀಘ್ರದಲ್ಲೇ ಸಾರ್ವಜನಿಕರ ಮುಂದೆ ಬಿಡುಗಡೆ ಮಾಡಲಾಗುವುದು ಎಂದು ಶಾಸಕ ಸಿಮೆಂಟ್ ಮಂಜು ಟಾಂಗ್ ನೀಡಿದರು.



ತಾಲೂಕಿನ ಕುನಿಗನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ವಡೂರು ಗ್ರಾಮದಲ್ಲಿ ನೂತನ ರಸ್ತೆ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿ, ವಡೂರು ಗ್ರಾಮದಲ್ಲಿ ಕಳೆದ ಸುಮಾರು 15 ವರ್ಷಗಳಿಂದ ಸುಸಜ್ಜಿತ ರಸ್ತೆ ಇಲ್ಲದೆ ಗ್ರಾಮಸ್ಥರು ತೊಂದರೆ ಅನುಭವಿಸುತ್ತಿದ್ದರು. ಶಾಸಕನಾಗಿ ಆಯ್ಕೆಯಾದರೆ ಇಲ್ಲಿ ರಸ್ತೆ ನಿರ್ಮಿಸುವುದಾಗಿ ಭರವಸೆ ನೀಡಿದ್ದೆ. ಆ ಭರವಸೆಯಂತೆ ಇಂದು 75 ಲಕ್ಷ ರೂ. ವೆಚ್ಚದಲ್ಲಿ 875 ಮೀಟರ್ ಉದ್ದದ ರಸ್ತೆ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಲಾಗಿದೆ ಎಂದರು.

ಪಟ್ಟಣದ ಒಳರಸ್ತೆಗಳು, ಪಟ್ಟಣದಿಂದ ಉಮಾಶಂಕರ್ ಸಮುದಾಯ ಭವನದ ಮೂಲಕ ಹಾಲೇಬೇಲೂರು ಕಡೆಗೆ ಹೋಗುವ ರಸ್ತೆ, ಕಬ್ಬಿನಗದ್ದೆ ರಸ್ತೆ, ಹೊಸಕೋಟೆ ರಸ್ತೆ, ಶೆಟ್ಟಿಹಳ್ಳಿ ರಸ್ತೆ ಸೇರಿದಂತೆ ಈ ಭಾಗದಲ್ಲಿ ಅನೇಕ ರಸ್ತೆಗಳನ್ನು ಅಭಿವೃದ್ಧಿಪಡಿಸಲಾಗಿದೆ ಎಂದು ಹೇಳಿದರು.

ಹಲವು ದಶಕಗಳಿಂದ ಸುಸಜ್ಜಿತ ರಸ್ತೆ ಕಾಣದ ಮಗ್ಗೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬಾಳಿಗನಹಳ್ಳಿಬಸವಪುರ ರಸ್ತೆಗೆ ₹20 ಲಕ್ಷ ಹಾಗೂ ಗಂಜಿಗೆರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮಂದಿರ ಗ್ರಾಮದಲ್ಲಿ 30 ಲಕ್ಷ ರೂ. ವೆಚ್ಚದಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲಾಗಿದೆ ಎಂದು ತಿಳಿಸಿದರು.

ಕುನಿಗನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಈಗಾಗಲೇ ರಸ್ತೆ ಅಭಿವೃದ್ಧಿ, ಶಾಲೆಗಳ ದುರಸ್ತಿ, ಸ್ಮಶಾನ ಅಭಿವೃದ್ಧಿ, ಗ್ರಂಥಾಲಯ, ಕೆರೆ ಅಭಿವೃದ್ಧಿ ಹಾಗೂ ದೇವಸ್ಥಾನಗಳ ಜೀರ್ಣೋದ್ಧಾರ ಸೇರಿದಂತೆ ಕೋಟ್ಯಾಂತರ ರೂಪಾಯಿ ಅನುದಾನ ಒದಗಿಸಲಾಗಿದೆ. ಮುಂದಿನ ದಿನಗಳಲ್ಲಿ ಈ ಭಾಗದಲ್ಲಿ ಇನ್ನಷ್ಟು ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗುವುದು ಎಂದರು.

ಬಾಳಿಗನಹಳ್ಳಿಬಸವಪುರ ಗ್ರಾಮದಲ್ಲಿ ಹಲವು ಶತಾಯುಷಿಗಳು ತಮ್ಮ ಜೀವನಾವಧಿಯಲ್ಲಿ ಸುಸಜ್ಜಿತ ರಸ್ತೆ ನೋಡದೇ ಇರುವುದು ದುರಂತವೆಂದು ಬೇಸರ ವ್ಯಕ್ತಪಡಿಸಿದ ಅವರು, ಗ್ರಾಮಸ್ಥರು ಹಾಗೂ ಪಕ್ಷದ ಮುಖಂಡರು ರಸ್ತೆ ದುಸ್ಥಿತಿಯ ಬಗ್ಗೆ ತಮ್ಮ ಗಮನಕ್ಕೆ ತಂದ ತಕ್ಷಣವೇ ಅನುದಾನ ಮೀಸಲಿಟ್ಟು ಕಾಮಗಾರಿಗೆ ಚಾಲನೆ ನೀಡಲಾಗಿದೆ ಎಂದರು.

ಗ್ರಾಮಸ್ಥ ವಿರೂಪಾಕ್ಷ ಮಾತನಾಡಿ, ಹಿಂದಿನ ಶಾಸಕರಾದ ಕುಮಾರಸ್ವಾಮಿಯವರು ಕನಿಷ್ಠ ರಸ್ತೆ ಗುಂಡಿಯನ್ನು ಮುಚ್ಚಿಸುವ ಕೆಲಸಕ್ಕೂ ಮುಂದಾಗಲಿಲ್ಲ. ಆದರೆ 15 ವರ್ಷಗಳಿಂದ ಆಗದ ರಸ್ತೆ ಕಾಮಗಾರಿಯನ್ನು ಶಾಸಕ ಸಿಮೆಂಟ್ ಮಂಜು ಅವರು ಕೈಗೆತ್ತಿಕೊಂಡಿದ್ದಾರೆ. ಇಷ್ಟು ದೊಡ್ಡ ಕ್ಷೇತ್ರವನ್ನು ದಿನನಿತ್ಯ ಸುತ್ತಿ, ಸೂಕ್ಷ್ಮವಾಗಿ ಸಮಸ್ಯೆಗಳನ್ನು ಗಮನಿಸಿ ಜನಪರ ಕೆಲಸ ಮಾಡುತ್ತಿದ್ದಾರೆ.

ಮುಂದಿನ ಚುನಾವಣೆಗಳಲ್ಲಿ ನಾವೆಲ್ಲರೂ ಮಂಜಣ್ಣನವರ ಕೈ ಬಲಪಡಿಸೋಣ ಎಂದು ಹೇಳಿದರು.

ಕುನಿಗನಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷೆ ತಾರಾ ಮಹೇಶ್, ಮಾಜಿ ಅಧ್ಯಕ್ಷ ಪ್ರಕಾಶ್, ಗ್ರಾಮ ಪಂಚಾಯಿತಿ ಸದಸ್ಯ ವಿರೂಪಾಕ್ಷ, ಬಿಜೆಪಿ ಸ್ಥಳೀಯ ಮುಖಂಡರಾದ ಪಾಲಾಕ್ಷ, ಕೇಶವ, ರಾಮಚಂದ್ರು, ಕುಮಾರ್, ತ್ರಿಯಂಬಿಕ್ ಸೇರಿದಂತೆ ಇತರರು ಇದ್ದರು.

### ಕಾರಿನಲ್ಲಿ ಸುಮ್ಮನೆ ಪ್ರವಾಸ ಮಾಡಲ್ಲ

ಕ್ಷೇತ್ರದ ಪ್ರತಿಯೊಂದು ಗ್ರಾಮದ ರಸ್ತೆಗಳ ಸ್ಥಿತಿ ನನಗೆ ತಿಳಿದಿದೆ. ಕಳೆದ 2.5 ವರ್ಷಗಳಿಂದ ಕ್ಷೇತ್ರದ ಪ್ರತಿಯೊಂದು ಹಳ್ಳಿಗೂ ಭೇಟಿ ನೀಡಿದ್ದೇನೆ. ಸಾರ್ವಜನಿಕರಿಗಾಗಿ ನನ್ನ ಬಹುಪಾಲು ಸಮಯವನ್ನು ಮೀಸಲಿಟ್ಟಿದ್ದೇನೆ. ನಾನು ಕಾರಿನಲ್ಲಿ ಕುಳಿತು ಸುಮ್ಮನೆ ಹೋಗುವುದಿಲ್ಲ. ಯಾವ ಗ್ರಾಮಕ್ಕೆ ಏನು ಅಗತ್ಯವಿದೆ ಎಂಬುದನ್ನು ಗುರುತಿಸಿ ಕೆಲಸ ಮಾಡುತ್ತೇನೆ. ಕೆಲವೇ ದಿನಗಳಲ್ಲಿ ನಾನು ತಂದ ಅನುದಾನ ಹಾಗೂ ಮಾಡಿರುವ ಅಭಿವೃದ್ಧಿ ಕಾರ್ಯಗಳ ವಿವರವನ್ನು ಇಲಾಖೆವಾರು ಅಂಕಿ-ಅಂಶಗಳೊಂದಿಗೆ ಬಿಡುಗಡೆ ಮಾಡುತ್ತೇನೆ ಎಂದು ಹೇಳಿದರು.

ಕ್ಷೇತ್ರದ 2.10 ಲಕ್ಷ ಜನರ ಧ್ವನಿಯಾಗಲು ಜನರು ನನ್ನನ್ನು ಆಯ್ಕೆ ಮಾಡಿದ್ದಾರೆ. ಸೋಮಾರಿತನದಿಂದ ಸಮಯ ವ್ಯರ್ಥ ಮಾಡಿಲ್ಲ. ಅನುದಾನ ಮಾತ್ರವೇ ಅಭಿವೃದ್ಧಿಯಲ್ಲ. ಸರ್ಕಾರದಿಂದ ಆಗಬೇಕಾದ ತಾಂತ್ರಿಕ ಕಾರ್ಯಗಳನ್ನು ಮಾಡಿಸಿ ಜನರಿಗೆ ಅನುಕೂಲ ಕಲ್ಪಿಸಲಾಗುತ್ತಿದೆ. ವಿರೋಧಿಗಳ ಅಪಪ್ರಚಾರವನ್ನು ಜನರು ಎಂದಿಗೂ ನಂಬುವುದಿಲ್ಲ ಎಂದು ಶಾಸಕ ಸಿಮೆಂಟ್ ಮಂಜು ಹೇಳಿದರು.

# ವಿದ್ಯುತ್ ಪ್ರವಹಿಸಿ ಲೈನ್ ಮ್ಯಾನ್‌ಗೆ ಗಂಭೀರ ಗಾಯ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಸಕಲೇಶಪುರ: ವಿದ್ಯುತ್ ಕಂಬವೇರಿ ದುರಸ್ತಿ ಕಾರ್ಯ ಮಾಡುತ್ತಿದ್ದಾಗ ಏಕಾಏಕಿ ವಿದ್ಯುತ್ ಪ್ರವಹಿಸಿ ಲೈನ್‌ಮ್ಯಾನ್ ಗಂಭೀರ ಗಾಯಗೊಂಡಿರುವ ಘಟನೆ ತಾಲ್ಲೂಕಿನ ಹಲಸುಲಿಗೆ ಗ್ರಾಮದಲ್ಲಿ ಬುಧವಾರ ನಡೆದಿದೆ.

ಪಟ್ಟಣದ ಕುಶಾಲನಗರ ಬಡಾವಣೆ ನಿವಾಸಿ ಸೆಸ್ಕ್ ಲೈನ್‌ಮ್ಯಾನ್ ಗೋಪಿ ಗಾಯಾಳು. ಉದೇವಾರ ಫೀಡರ್ ವ್ಯಾಪ್ತಿಯ ಹಲಸುಲಿಗೆ ಕ್ಯಾಂಪ್‌ನಲ್ಲಿ ವಿದ್ಯುತ್ ತಂತಿ ದುರಸ್ತಿ ನಡೆಯುತ್ತಿದ್ದ ವೇಳೆ ಅವಘಡ ಸಂಭವಿಸಿದೆ.

ದುರಸ್ತಿ ಕಾರ್ಯಕ್ಕಾಗಿ ಮಾರ್ಗ ಮುಕ್ತತೆ (ಶಟ್‌ಡೌನ್) ಪಡೆಯಲಾಗಿದ್ದು, ಇನ್ನೇನು ಕೆಲವೇ ನಿಮಿಷಗಳಲ್ಲಿ ಕೆಲಸ ಮುಗಿಯಬೇಕಾದ ಸಂದರ್ಭದಲ್ಲಿ ಉಪಕೇಂದ್ರದಲ್ಲಿ ಉಂಟಾದ ಗೊಂದಲದಿಂದ ಅಕಾಲಿಕವಾಗಿ ವಿದ್ಯುತ್ ಸರಬರಾಜು ನೀಡಲಾಗಿದೆ. ಪರಿಣಾಮವಾಗಿ ಲೈನ್‌ನಲ್ಲಿ ಕಾರ್ಯನಿರ್ವಹಿಸುತ್ತಿದ್ದ ಗೋಪಿ ಅವರಿಗೆ ವಿದ್ಯುತ್ ಪ್ರವಹಿಸಿ ಗಂಭೀರವಾಗಿ ಗಾಯವಾಗಿದೆ. ಬಾಳ್ಳುಪೇಟೆ ಹಾಗೂ ಶುಕ್ರವಾರಸಂತೆ ಉಪಕೇಂದ್ರಗಳ ಜೂನಿಯರ್ ಎಂಜಿನಿಯರ್‌ಗಳ ಮಾರ್ಗ ಮುಕ್ತತೆ ಪಡೆದುಕೊಂಡಿದ್ದರು. ಈ ನಡುವೆ ಶುಕ್ರವಾರಸಂತೆ ಜೂನಿಯರ್ ಎಂಜಿನಿಯರ್ ಲೋಕೇಶ್ ಅವರು ಜೂನಿಯರ್ ಎಂಜಿನಿಯರ್ ವಾಪಸ್ ವಿದ್ಯುತ್ ಸರಬರಾಜು ನೀಡಲು ಮನವಿ ಮಾಡಿದ್ದಾರೆ. ಆದರೆ ಉಪಕೇಂದ್ರದಲ್ಲಿ ಶುಕ್ರವಾರಸಂತೆ ಕಡೆಗೆ ವಿದ್ಯುತ್ ನೀಡುವ ಬದಲು ಉದೇವಾರ ಫೀಡರ್ ವಿದ್ಯುತ್ ಸರಬರಾಜು ನೀಡಿದ್ದರಿಂದ ಅವಘಡ ಸಂಭವಿಸಿದೆ ಎನ್ನಲಾಗಿದೆ.

ಗಂಭೀರವಾಗಿ ಗಾಯಗೊಂಡ ಗೋಪಿ ಅವರನ್ನು ಮೊದಲು ಪಟ್ಟಣದ ಕ್ರಾಫರ್ಡ್ ಆಸ್ಪತ್ರೆಗೆ ದಾಖಲಿಸಿ ಪ್ರಾಥಮಿಕ ಚಿಕಿತ್ಸೆ ನೀಡಿ ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿನ ಆಸ್ಪತ್ರೆಗೆ ಕರೆದೊಯ್ಯಲಾಯಿತು.

# ಜ.20 ರಿಂದ ಸರ್ಕಾರಿ ನೌಕರರ ಕ್ರೀಡಾಕೂಟ




ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಆಶ್ರಯದಲ್ಲಿ ಜ. 20 ಮತ್ತು 21 ರಂದು ರಂದು ಜಿಲ್ಲಾ ಮಟ್ಟದ ಸರ್ಕಾರಿ ನೌಕರರ ಕ್ರೀಡಾಕೂಟ ಮತ್ತು ಸಾಂಸ್ಕೃತಿಕ ಸ್ಪರ್ಧೆ ಏರ್ಪಡಿಸಲಾಗಿದೆ ಎಂದು ನೌಕರರ ಸಂಘದ ಜಿಲ್ಲಾಧ್ಯಕ್ಷ ಬಾಗೂರು ಕೃಷ್ಣೇಗೌಡ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿ, ಜಿಲ್ಲಾ ಕ್ರೀಡಾಂಗಣದ ಹಾಕಿ ಮೈದಾನದಲ್ಲಿ ಆಟೋಟ ಸ್ಪರ್ಧೆ ನಡೆಯಲಿವೆ. ಅಂದು ಬೆಳಗ್ಗೆ 11 ಗಂಟೆಗೆ ಉಸ್ತುವಾರಿ ಸಚಿವ ಕೃಷ್ಣ ಬೈರೇಗೌಡ ಕ್ರೀಡಾಕೂಟಕ್ಕೆ ಚಾಲನೆ ನೀಡಲಿದ್ದಾರೆ. ಸ್ಥಳೀಯ ಶಾಸಕ ಹೆಚ್.ಪಿ.ಸ್ವರೂಪ್ ಪ್ರಕಾಶ್ ಅಧ್ಯಕ್ಷತೆ ವಹಿಸುವರು. ಅರಸೀಕೆರೆ ಶಾಸಕ ಕೆ.ಎಂ.ಶಿವಲಿಂಗೇಗೌಡ, ಸಂಸದ ಶ್ರೇಯಸ್ ಪಟೇಲ್ ಭಾಗವಹಿಸಲಿದ್ದಾರೆ ಎಂದರು.

ಸರ್ಕಾರಿ ನೌಕರರ ಜೊತೆಗೆ ನಗರದ ಶಾಲಾ ಮತ್ತು ಕಾಲೇಜು ವಿದ್ಯಾರ್ಥಿಗಳು ಭಾಗಿಯಾಗಿ ಸಂಜೆ 6 ಗಂಟೆ ನಂತರ ಸಾಂಸ್ಕೃತಿಕ ಮನರಂಜನಾ ಕಾರ್ಯಕ್ರಮ ನಡೆಸಿಕೊಡಲಿದ್ದಾರೆ.

ನೋಂದಣಿಗೆ ಆನ್‌ಲೈನ್ ವ್ಯವಸ್ಥೆ ಮಾಡಲಾಗಿದ್ದು, ಈಗಾಗಲೇ ಎಲ್ಲರಿಗೂ ಲಿಂಕ್ ಶೇರ್ ಮಾಡಲಾಗಿದ್ದು, ಹಾಲಿ 2800 ಮಂದಿ ನೋಂದಣಿ ಮಾಡಿಕೊಂಡಿದ್ದಾರೆ. ಈ ಅವಕಾಶ ಜ.16 ವರೆಗೂ ಇದ್ದು, ಅಂದಾಜು 3500 ಮಂದಿ ನೋಂದಣಿ ಮಾಡಿಕೊಳ್ಳುವ ಸಾಧ್ಯತೆ ಇದೆ ಎಂದರು.

# ಸಕಲೇಶಪುರದ ಏಳು ಕೇಂದ್ರಗಳಲ್ಲಿ ಹಿಂದು ಸಮಾಜೋತ್ಸವ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಸಕಲೇಶಪುರ: ತಾಲೂಕಿನಲ್ಲಿ ಹಿಂದು ಸಮಾಜದ ಶಕ್ತಿ ಪ್ರದರ್ಶನ ಹಾಗೂ ಸಮಾಜ ಎದುರಿಸುತ್ತಿರುವ ಸವಾಲುಗಳನ್ನು ಸಮರ್ಥವಾಗಿ ಎದುರಿಸುವ ಉದ್ದೇಶದಿಂದ ಹಿಂದು ಸಮಾಜೋತ್ಸವ ಆಯೋಜನಾ ಸಮಿತಿಯ ವತಿಯಿಂದ ಏಳು ಕೇಂದ್ರಗಳಲ್ಲಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಸಮಿತಿಯ ಅಧ್ಯಕ್ಷ ಲೋಹಿತ್ ಜಂಬರಡಿ ಹೇಳಿದರು.




ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿ, ರಾಷ್ಟ್ರೀಯ ಸ್ವಯಂ ಸೇವಕ ಸಂಘ ಮತ್ತು ಪರಿವಾರ ಸಂಘಟನೆಗಳು ಕಳೆದ 100 ವರ್ಷಗಳಿಂದ ದೇಶದಾದ್ಯಂತ ಸಮಾಜ ನಿರ್ಮಾಣದ ಕಾರ್ಯದಲ್ಲಿ ತೊಡಗಿಕೊಂಡಿವೆ. ಪ್ರಸ್ತುತ ಸಂಘದ ಶತಮಾನೋತ್ಸವ ದೇಶದಲ್ಲಿ ನಡೆಯುತ್ತಿದ್ದು, ಸಂಘಕ್ಕೆ ಶಕ್ತಿ ತುಂಬುವ ಹಾಗೂ ಸಮಾಜ ನೈತಿಕವಾಗಿ ಸಂಘದ ಜೊತೆಯಲ್ಲಿದೆ ಎಂಬ ಸಂದೇಶ ಸಾರುವ ಉದ್ದೇಶದಿಂದ ಹಿಂದು ಸಮಾಜೋತ್ಸವ ಆಯೋಜಿಸಲಾಗಿದೆ ಎಂದು ಹೇಳಿದರು.

ಈ ಬಾರಿ ನಗರ ಕೇಂದ್ರಿತ ಕಾರ್ಯಕ್ರಮಗಳ ಬದಲಾಗಿ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಕಾರ್ಯಕ್ರಮ ನಡೆಸುವ ನಿಟ್ಟಿನಲ್ಲಿ ಎರಡರಿಂದ ಮೂರು ಪಂಚಾಯತಿಗಳನ್ನು ಒಟ್ಟುಗೂಡಿಸಿ ಸಮಾಜೋತ್ಸವ ನಡೆಸಲಾಗುವುದು. ಇದರಿಂದ ಸಂಘದ ವಿಚಾರಗಳು ಪ್ರತಿಯೊಬ್ಬರಿಗೂ ತಲುಪಲಿದ್ದು, ಧರ್ಮ, ಸಂಸ್ಕೃತಿ, ಆಚಾರ-ವಿಚಾರಗಳು ಮನೆಮನೆಗೂ ತಲುಪುವಂತಾಗಬೇಕು ಎಂಬುದು ಈ ಕಾರ್ಯಕ್ರಮದ ಉದ್ದೇಶವಾಗಿದೆ.

ಪ್ರತಿಯೊಂದು ಕೇಂದ್ರದಲ್ಲೂ 20ರಿಂದ 30 ಸದಸ್ಯರ ಸ್ಥಳೀಯ ಸಮಿತಿಗಳನ್ನು ರಚಿಸಲಾಗಿದ್ದು, ಪ್ರತಿ ಮನೆಗೂ ನೇರ ಸಂಪರ್ಕ ಸಾಧಿಸುವ ಕಾರ್ಯ ಆರಂಭಿಸಲಾಗಿದೆ ಎಂದು ತಿಳಿಸಿದರು.

ಬಾಳ್ಳುಪೇಟೆ ಕುನಿಗನಹಳ್ಳಿ ಪಂಚಾಯತಿಗಳನ್ನು ಸೇರಿಸಿ ಬಾಳ್ಳುಪೇಟೆಯಲ್ಲಿ ಕಾರ್ಯಕ್ರಮ, ಬಿರಡಹಳ್ಳಿಉದಯವಾರಹಲಸುಲಿಗೆ ಪಂಚಾಯತಿಗಳನ್ನು ಸೇರಿಸಿ ಬಿರಡಹಳ್ಳಿಯಲ್ಲಿ ಕಾರ್ಯಕ್ರಮ, ದೇವಾಲದಕೆರೆ ಹಾನುಬಾಳ್ ಗ್ರಾ.ಪಂಗಳನ್ನು ಸೇರಿಸಿ ಹಾನುಬಾಳ್ನಲ್ಲಿ ಕಾರ್ಯಕ್ರಮ, ಹೆಬ್ಬಸಾಲೆ ಕ್ಯಾಮನಹಳ್ಳಿ, ಗ್ರಾ.ಪಂ ಸೇರಿಸಿ ಕ್ಯಾಮನಹಳ್ಳಿಯಲ್ಲಿ ಕಾರ್ಯಕ್ರಮ, ಬ್ಯಾಕರವಳ್ಳಿ ಕ್ಯಾನಹಳ್ಳಿ ಗ್ರಾ.ಪಂಗಳು ಸೇರಿ ಕ್ಯಾನಹಳ್ಳಿಯಲ್ಲಿ ಕಾರ್ಯಕ್ರಮ, ಬಾಗೆ ಹಾಗೂ ಬೆಳಗೋಡು ಗ್ರಾ.ಪಂ ಸೇರಿಸಿ ಬಾಗೆಯಲ್ಲಿ ಕಾರ್ಯಕ್ರಮ, ಸಕಲೇಶಪುರ ನಗರ, ಮಳಲಿ ಗ್ರಾ.ಪಂ, ಆನೆಮಹಲ್, ಗ್ರಾ.ಪಂ ಹಾಗೂ ಹೆಗ್ಗದ್ದೆ ಗ್ರಾ.ಪಂ ಸೇರಿಸಿ ಜನವರಿ 28 ರಂದು ಸಕಲೇಶಪುರ ಪಟ್ಟಣದಲ್ಲಿ ಕಾರ್ಯಕ್ರಮ ನಡೆಯಲಿದೆ. ಉಳಿದ ಕೇಂದ್ರಗಳ ದಿನಾಂಕ ಮತ್ತು ಸ್ಥಳವನ್ನು ಶೀಘ್ರದಲ್ಲೇ ಘೋಷಿಸಲಾಗುವುದು ಎಂದರು. ತಾಲ್ಲೂಕಿನ ಎಲ್ಲಾ ಹಿಂದೂಗಳು ಕಾರ್ಯಕ್ರಮಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಹಿಂದು ಸಮಾಜೋತ್ಸವವನ್ನು ಯಶಸ್ವಿಗೊಳಿಸುವಂತೆ ಮನವಿ ಮಾಡಿದರು.

ಕಾರ್ಯಕ್ರಮದ ಸಂಯೋಜಕ ವಿಷ್ಣು ಮಾತನಾಡಿ, ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಲು ಸಮಿತಿ ಅಧ್ಯಕ್ಷರಾಗಿ ಲೋಹಿತ್, ಉಪಾಧ್ಯಕ್ಷರಾಗಿ ಮೇಘನ, ಕಾರ್ಯದರ್ಶಿಯಾಗಿ ಅಶ್ವಥ್ ವಳಲಹಳ್ಳಿ ಹಾಗೂ ರಮೇಶ್ ಟೈಲ್ಸ್, ಕೋಶಾಧಿಕಾರಿಯಾಗಿ ಸ್ಟುಡಿಯೋ ರಘುರವರನ್ನು ನೇಮಕ ಮಾಡಲಾಗಿದೆ ಎಂದರು.

ದೇವಾಲದಕೆರೆ ಮೇಘನಾ, ಸ್ಟುಡಿಯೋ ರಘು ಉಪಸ್ಥಿತರಿದ್ದರು.

# ಸರ್ಕಾರಿ ಶಾಲೆ ಉಳಿಸಲು ಗ್ರಾಮಸ್ಥರ ಸಹಕಾರ ಅಗತ್ಯ

## ಬ್ಯಾಡರಹಳ್ಳಿಯಲ್ಲಿ ಕಲಿಕಾ ಹಬ್ಬ | ಕೆಡಿಪಿ ಸದಸ್ಯ ಯೋಗೇಶ್ ಸಲಹೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಚನ್ನರಾಯಪಟ್ಟಣ: ಸರ್ಕಾರಿ ಶಾಲೆಗಳನ್ನು ಉಳಿಸಿಕೊಳ್ಳುವಲ್ಲಿ ಗ್ರಾಮಸ್ಥರು ಮುಂದಾಗಬೇಕು ಎಂದು ಕೆಡಿಪಿ ಸದಸ್ಯ ಬ್ಯಾಡರಹಳ್ಳಿ ಯೋಗೇಶ್ ಹೇಳಿದರು.



ತಾಲ್ಲೂಕಿನ ಬ್ಯಾಡರಹಳ್ಳಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಆಯೋಜಿಸಿದ್ದ ಕಲಿಕಾ ಹಬ್ಬ ಕಾರ್ಯಕ್ರಮದಲ್ಲಿ ಮಾತನಾಡಿ, ಪಾಲಕರು ಆಂಗ್ಲ ಮಾಧ್ಯಮದ ವ್ಯಾಮೋಹದಿಂದ ಹೊರ ಬಂದಲ್ಲಿ ಮಾತ್ರ ಸರ್ಕಾರಿ ಶಾಲೆಗಳು ಉಳಿಯಲಿವೆ ಎಂದರು.

ಸರ್ಕಾರಿ ಶಾಲೆಗಳು ಉಚಿತ ಶಿಕ್ಷಣ ನೀಡುವ ಮೂಲಕ ಬಡ ಮಕ್ಕಳಿಗೆ ವೇದಿಕೆ ಕಲ್ಪಿಸಿಕೊಡಲಿವೆ. ಸರ್ಕಾರಿ ಶಾಲೆಯಲ್ಲಿ ಓದಿದ ಅದೆಷ್ಟೋ ಮಹನೀಯರು ಕೃಷಿ, ವಿಜ್ಞಾನ, ಶಿಕ್ಷಣ, ರಾಜಕೀಯ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವುದು ಶ್ಲಾಘನೀಯ ಸಂಗತಿ ಎಂದು ತಿಳಿಸಿದರು. ಗ್ರಾಮದ ಶಾಲಾ ಕಟ್ಟಡದ ಗೋಡೆ ಬಿರುಕು ಬಿಟ್ಟಿದ್ದು ಕಿಟಕಿ, ಬಾಗಿಲು ಹಾಗೂ ಛಾವಣಿಯ ಮರ ಮುಟ್ಟುಗಳು ಗೆದ್ದಲು ಹಿಡಿದಿವೆ. ಇಂತಹ ಅಪಾಯದ ಕೆಳಗೆ ಕುಳಿತು ವಿದ್ಯಾರ್ಥಿಗಳು ಶಿಕ್ಷಣ ಪಡೆಯಬೇಕಾದ ಅನಿವಾರ್ಯತೆ ಇದೆ. ಹಿನ್ನೆಲೆಯಲ್ಲಿ ಶಾಲಾ ಕೊಠಡಿ ದುರಸ್ತಿ ಅಗತ್ಯವಿದ್ದು ಅಗತ್ಯ ಅನುದಾನ ಕಲ್ಪಿಸುವಂತೆ ಕೆಡಿಪಿ ಸಭೆಯಲ್ಲಿ ಮನವಿ ಮಾಡಲಾಗಿದೆ ಎಂದರು.

ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿ ಅನಿಲ್ ಮಾತನಾಡಿ, ಶೈಕ್ಷಣಿಕ ಅಭಿವೃದ್ಧಿ ಸಲುವಾಗಿ ಸರ್ಕಾರವು ಉಚಿತವಾಗಿ ಶಿಕ್ಷಣ ನೀಡುತ್ತಿದೆ. ಸರ್ಕಾರಿ ಶಾಲೆಗಳ ಮಕ್ಕಳಿಗೆ ಯಾವುದೇ ಒಂದು ಸಣ್ಣ ಅವಕಾಶ ಸಿಕ್ಕರೆ ಸಾಕು ಸದ್ಬಳಕೆ ಮಾಡಿಕೊಳ್ಳುವ ಸಾಮರ್ಥ್ಯವಿದೆ ಎಂದರು.

ಆಂಗ್ಲ ಮಾಧ್ಯಮ ಹಾಗೂ ಖಾಸಗಿ ಶಾಲಾ ವ್ಯಾಮೋಹಕ್ಕೆ ಪಾಲಕರು ಜೋತು ಬಿದ್ದಿರುವ ಪರಿಣಾಮ ಸರ್ಕಾರಿ ಶಾಲೆಗಳು ಬೀಗ ಹಾಕುವ ಹಂತ ತಲುಪುತ್ತಿವೆ. ಸರ್ಕಾರಿ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣ ಹಾಗೂ ಸಂಸ್ಕಾರ ಸಿಗಲಿದೆ. ಸರ್ಕಾರಿ ಶಾಲೆಯಲ್ಲಿ ಶಿಕ್ಷಣ ಪಡೆದ ವಿದ್ಯಾರ್ಥಿ ಸಮಾಜದ ಯಾವುದೇ ಮೂಲೆಯಲ್ಲಿ ಬೇಕಾದರೂ ಬದುಕು ಕಟ್ಟಿಕೊಳ್ಳುತ್ತಾನೆ ಎಂದು ಪಾಲಕರಿಗೆ ಕಿವಿಮಾತು ಹೇಳಿದರು. ದಿನದಿಂದ ದಿನಕ್ಕೆ ಮಕ್ಕಳ ಹಾಜರಾತಿ ಕಡಿಮೆಯಾಗುತ್ತಿರುವ ಪರಿಣಾಮ ಗ್ರಾಮೀಣ ಭಾಗದ ಸಾಕಷ್ಟು ಸರ್ಕಾರಿ ಶಾಲೆಗಳು ಬಾಗಿಲು ಮುಚ್ಚುತ್ತಿವೆ. ಒಮ್ಮೆ ಶಾಲೆ ಬಾಗಿಲು ಮುಚ್ಚಿದರೆ ಮತ್ತೊಮ್ಮೆ ತೆರೆಯಲು ಸಾಧ್ಯವಿಲ್ಲ. ಹೊಸದಾಗಿ ಶಾಲೆ ತೆರೆಯಬೇಕೆಂದರೆ 25 ವಿದ್ಯಾರ್ಥಿಗಳ ಹಾಜರಾತಿ ಬೇಕಾಗಲಿದೆ ಎಂದು ತಿಳಿಸಿದರು.

ಗ್ರಾಮ ಪಂಚಾಯಿತಿ ಅಧ್ಯಕ್ಷ ಗಂಗಾಧರ್ ಮಾತನಾಡಿ, ಉನ್ನತ ಹುದ್ದೆಗಳನ್ನು ಹರಸಿ ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸಬಾರದು. ಸಮಾಜದಲ್ಲಿ ಉತ್ತಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುವ ನಿಟ್ಟಿನಲ್ಲಿ ಶಿಕ್ಷಣವಂತರಾಗಿ ಬೆಳೆಸುವುದು ಪ್ರತಿಯೊಬ್ಬ ಪಾಲಕರ ಆದ್ಯ ಕರ್ತವ್ಯವಾಗಿದೆ ಎಂದು ಸಲಹೆ ನೀಡಿದರು.

ತಂದೆ, ತಾಯಿ ಹಾಗೂ ಪೋಷಕರ ದೈನಂದಿನ ಬದುಕು ಮಕ್ಕಳ ಭವಿಷ್ಯದ ಮೆಟ್ಟಿಲು ಹಾಗೂ ದಾರಿ ದೀಪವಾಗಲಿದೆ. ಮಕ್ಕಳ ಮುಂದೆ ಜಗಳ ಮಾಡುವುದು ಇಲ್ಲವೇ ಅವ್ಯಾಚ ಶಬ್ದಗಳನ್ನು ಬಳಕೆ ಮಾಡಬಾರದು. ಇದರಿಂದ ಮಕ್ಕಳ ಮನಸ್ಸು ಹಾಗೂ ಶೈಕ್ಷಣಿಕ ಜೀವನದ ಮೇಲೆ ಪ್ರಭಾವ ಬೀರುತ್ತದೆ ಎಂದು ಎಚ್ಚರಿಸಿದರು.

ಖಾಸಗಿ ಶಾಲೆಗಳು ಒಳ್ಳೆಯ ವಿದ್ಯಾರ್ಥಿಗಳಿಗೆ ಮಾತ್ರ ಅವಕಾಶ ನೀಡುತ್ತಿವೆ ವಿನಃ ಕಡಿಮೆ ಅಂಕ ಗಳಿಸಿದ ಮಕ್ಕಳಿಗೆ ಆದ್ಯತೆ ನೀಡುವುದಿಲ್ಲ. ಹೆತ್ತವರನ್ನು ಸಾಕಲು, ಗುರು ಹಿರಿಯರಿಗೆ ಗೌರವ ನೀಡಲು ಹಾಗೂ ಸಮಾಜದಲ್ಲಿ ತಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲು ಶಿಕ್ಷಣವೆ ಮುಖ್ಯವಲ್ಲ ಸಂಸ್ಕಾರ ಬೇಕು ಎಂದು ಕಿವಿಮಾತು ಹೇಳಿದರು.

ಕ್ಲಸ್ಟರ್ ಮಟ್ಟದ ಅಡಿಗೆ ಸ್ಪರ್ಧೆಯಲ್ಲಿ ವಿವಿಧ ಖಾದ್ಯಗಳನ್ನು ಸಿದ್ಧಪಡಿಸಿ ಪ್ರದರ್ಶನ ನೀಡಲಾಯಿತು. ತೀರ್ಪುಗಾರರು ಶುದ್ಧತೆ ಹಾಗೂ ರುಚಿ ಪರಿಗಣಿಸಿ ಫಲಿತಾಂಶ ನೀಡಿದರು. ಕೊತ್ತನಹಳ್ಳಿ ಶಾಲೆ ಪ್ರಥಮ, ಬ್ಯಾಡರಹಳ್ಳಿ ಶಾಲೆ ದ್ವಿತೀಯ ಹಾಗೂ ಪಿಎಂ ಶ್ರೀ ಶಾಸಕರ ಮಾದರಿ ಹಿರಿಯ ಪ್ರಾಥಮಿಕ ಶಾಲೆ ತೃತೀಯ ಸ್ಥಾನಕ್ಕೆ ಭಾಜನವಾಯಿತು.

ಶಿಕ್ಷಣ ಸಂಯೋಜಕ ಶ್ರೀನಿವಾಸ್, ಸಿಆರ್ ಪಿ ಧರ್ಮಪಾಲ್, ಎಸ್ಡಿಎಂಸಿ ಅಧ್ಯಕ್ಷ ಸತೀಶ್, ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಬೆಟ್ಟೇಗೌಡ, ಸರ್ಕಾರಿ ನೌಕರರ ಸಂಘದ ಜಿಲ್ಲಾ ನಿರ್ದೇಶಕ ಹಿರಿಯಣ್ಣ. ತಾಲ್ಲೂಕು ನಿರ್ದೇಶಕ ಹೆಚ್.ಎನ್.ಮೂರ್ತಿ, ಮುಖ್ಯಶಿಕ್ಷಕಿ ದ್ರಾಕ್ಷಾಹಿಣಿ, ಪಾಲಕರು ಹಾಗೂ ಇತರರು ಇದ್ದರು.

# ಪಾಲಿಕೆ ಕಂದಾಯ ಬಾಕಿ ಪೆಟ್ರೋಲ್ ಬಂಕ್‌ಗೆ ಶಾಕ್

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್




ಹಾಸನ: ಮಹಾನಗರ ಪಾಲಿಕೆಗೆ ಕಟ್ಟಬೇಕಿದ್ದ ಕಂದಾಯವನ್ನು ಬಾಕಿ ಉಳಿಸಿಕೊಂಡ ಹಿನ್ನೆಲೆಯಲ್ಲಿ ಬುಧವಾರ ನಗರದ ಸಾಲಗಾಮೆ ರಸ್ತೆಯ ಸಾಯಿಬಾಬಾ ದೇವಸ್ಥಾನ ಸಮೀಪದ ಪೆಟ್ರೋಲ್ ಬಂಕ್ ಕಚೇರಿಗೆ ಬೀಗ ಹಾಕಲಾಯಿತು.

ಮಹಾನಗರ ಪಾಲಿಕೆ ಪೌರಾಯುಕ್ತ ಆರ್.ಕೃಷ್ಣಮೂರ್ತಿ ಹಾಗೂ ಸಿಬ್ಬಂದಿ ಬೀಗ ಹಾಕುವ ಮೂಲಕ ಎಚ್ಚರಿಕೆ ನೀಡಿದರು. ನಗರದಲ್ಲಿ ಕಂದಾಯ ಉಳಿಸಿಕೊಂಡಿರುವವರ ಸಂಖ್ಯೆ ಹೆಚ್ಚಿದ್ದು ಎಲ್ಲರಿಗೂ ನೋಟೀಸ್ ಜಾರಿ ಮಾಡಲಾಗಿತ್ತು. ಯಾವುದಕ್ಕೂ ಪ್ರತಿಕ್ರಿಯೆ ನೀಡದ ಹಿನ್ನೆಲೆಯಲ್ಲಿ ಬೀಗ ಹಾಕಲಾಗುತ್ತಿದೆ ಎಂದು ಆರ್.ಕೃಷ್ಣಮೂರ್ತಿ ಹೇಳಿದರು.

ಪೆಟ್ರೋಲ್ ಬಂಕ್‌ನವರು 2002 ರಿಂದ ಸುಮಾರು 35 ಲಕ್ಷ ರೂ. ಬಾಕಿ ಉಳಿಸಿಕೊಂಡಿದ್ದಾರೆ. ಹಲವು ಬಾರಿ ನೋಟೀಸ್ ನೀಡಿದ್ದರೂ ಬಾಕಿ ಪಾವತಿ ಮಾಡಿಲ್ಲ. ಮೊದಲು ವಾಣಿಜ್ಯ ಸಂಕೀರ್ಣ ಮತ್ತು ಮಳಿಗೆಗಳ ಮೇಲೆ ಕ್ರಮ ಕೈಗೊಳ್ಳಲಾಗುವುದು ಎಂದರು.

ಹಾಸನ ನಗರಸಭೆಯಿಂದ ಮಹಾನಗರ ಪಾಲಿಕೆಯಾಗಿ ಮೇಲ್ದರ್ಜೆಗೇರಿದ ಬಳಿಕ ವ್ಯಾಪ್ತಿ ವಿಸ್ತರಿಸಿದೆ. ವಾರ್ಷಿಕ 20 ಕೋಟಿ ರೂ. ಕಂದಾಯ ಪಾವತಿಯಾಗುತ್ತದೆ. ಮುಂದಿನ ವರ್ಷದಿಂದ ಅದರ ಪ್ರಮಾಣ ಹೆಚ್ಚಲಿದೆ. ಯಾರ್ಯಾರು ಕಂದಾಯ ಪಾವತಿಸಲು ನಿರ್ಲಕ್ಷ್ಯ ತೋರಿಸುತ್ತಾರೆಯೋ ಅಂತಹವರಿಗೆ ಇದೇ ಪ್ರಕ್ರಿಯೆ ಮುಂದುವರಿಯಲಿದೆ ಎಂದು ಎಚ್ಚರಿಕೆ ನೀಡಿದರು.

ವಾಣಿಜ್ಯ ಮಳಿಗೆಗಳಿಂದ ಕಂದಾಯ ವಸೂಲಾತಿ ಪ್ರಕ್ರಿಯೆ ಮುಗಿದ ಬಳಿಕ ಮನೆಗಳಿಂದ ಭೇಟಿ ನೀಡಲಾಗುವುದು. ದೀರ್ಘ ಅವಧಿ ವರೆಗೆ ಬಾಕಿ ಉಳಿಸಿಕೊಂಡವರಿಗೆ ನೋಟೀಸ್ ನೀಡಲಾಗಿದೆ. ನಿಗದಿತ ಅವಧಿಯೊಳಗೆ ಪಾವತಿಸದಿದ್ದರೆ ಮನೆಗಳಿಗೆ ನೀರಿನ ಸಂಪರ್ಕ ಕಡಿತಗೊಳಿಸಲಾಗುವುದು ಎಂದರು.




# 2028ರಲ್ಲಿ ಶಾಸಕ ಶಿವಲಿಂಗೇಗೌಡರ ಸೋಲಿಸುವ ಶಪಥ

## ಅರಸೀಕೆರೆ ಜೆಡಿಎಸ್ ಮುಖಂಡರ ವಾಗ್ದಾಳಿ | ಏಕವಚನ ಪ್ರಯೋಗ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್



ಹಾಸನ: ಮಾಜಿ ಸಚಿವ ಹೆಚ್.ಡಿ.ರೇವಣ್ಣ ಅವರ ಕುರಿತು ಹಗುರವಾಗಿ ಮಾತನಾಡುತ್ತಿರುವ ಶಾಸಕ ಕೆ.ಎಂ. ಶಿವಲಿಂಗೇಗೌಡರ ಗರ್ವ ಭಂಗ ಮಾಡುತ್ತೇವೆ ಎಂದು ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಬಾಣಾವರ ಅಶೋಕ್ ಸವಾಲೆಸೆದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಏನೂ ಕೆಲಸವಿಲ್ಲದೆ ಅಲೆಯುತ್ತಿದ್ದ ವ್ಯಕ್ತಿಯನ್ನು ಜಿಲ್ಲಾ ಪಂಚಾಯಿತಿ ಸದಸ್ಯನನ್ನಾಗಿ ಮಾಡಿ ರಾಜಕೀಯ ಜೀವನ ಕಲ್ಪಿಸಿದ್ದು ಹೆಚ್.ಡಿ.ದೇವೇಗೌಡ ಹಾಗೂ ಹೆಚ್.ಡಿ.ರೇವಣ್ಣ ಎಂಬುದನ್ನು ಮರೆಯಬಾರದು. ಶಿವಲಿಂಗೇಗೌಡ ಅವರು ಶಾಸಕರಾಗಿ ಏನೇ ಕೆಲಸ ಮಾಡಿದ್ದರೂ ಅದು ಜೆಡಿಎಸ್ ಸರ್ಕಾರದ ನೆರವಿನಿಂದ ಹೊರತು ಕಾಂಗ್ರೆಸ್ ಸರ್ಕಾರದಿಂದ ಬಿಡಿಗಾಸು ಅನುದಾನ ತಂದಿಲ್ಲ. ಕಳೆದ ಎರಡೂವರೆ ವರ್ಷದಲ್ಲಿ ಕ್ಷೇತ್ರ ಅಭಿವೃದ್ಧಿಗೆ ಏನು ಮಾಡಿದ್ದಾರೆಂಬುದರ ಬಗ್ಗೆ ಶ್ವೇತ ಪತ್ರ ಹೊರಡಿಸಲಿಯೆಂದು ಸವಾಲೆಸೆದರು.

ಜೆಡಿಎಸ್ ಪಕ್ಷಕ್ಕೆ ಜನರು ಓಟು ಹಾಕುತ್ತಿದ್ದರೇ ಹೊರತು ಶಿವಲಿಂಗೇಗೌಡರ ಮುಖ ನೋಡಿ ಅಲ್ಲ. ಶಿವಲಿಂಗೇಗೌಡರಿಗೆ ಜೆಡಿಎಸ್ ಅನಿವಾರ್ಯ ಹೊರತು ಪಕ್ಷಕ್ಕೆ ಅವರ ಅವಶ್ಯಕತೆಯಿರಲಿಲ್ಲ. ಅಧಿಕಾರದ ಆಸೆಗೆ ಪಕ್ಷ ತೊರೆದು ಉಂಡ ಮನೆಗೆ ದ್ರೋಹ ಬಗೆದಿದ್ದು ಶಿವಲಿಂಗೇಗೌಡ ಎಂದು ಏಕವಚನದಲ್ಲಿ ವಾಗ್ದಾಳಿ ನಡೆದಿದರು.

2028ರ ವಿಧಾನಸಭೆ ಚುನಾವಣೆಯಲ್ಲಿ ಸೋಲಿನ ಭಯ ಈಗಲೇ ಕಾಡುತ್ತಿದೆ. ಹೀಗಾಗಿ ಮಾನಸಿಕ ಸ್ಥಿಮಿತ ಕಳೆದುಕೊಂಡು ಮಾತನಾಡುತ್ತಿದ್ದಾರೆ. ನಗರದ ಪಿ.ಪಿ.ವೃತ್ತದಲ್ಲಿ ಇತ್ತೀಚೆಗೆ ನಡೆದ ಕಾರ್ಯಕ್ರಮವೊಂದರಲ್ಲಿ ಹೆಚ್.ಡಿ.ರೇವಣ್ಣ ಕುರಿತು ವಿಷಕಾರಿದ್ದಾರೆ. ಮಾಜಿ ಪ್ರಧಾನಿ ದೇವೇಗೌಡರ ಕುಟುಂಬದ ವಿರುದ್ಧ ಮಾತನಾಡಿದರೆ ಸಚಿವ ಸಂಪುಟದಲ್ಲಿ ಸ್ಥಾನ ಸಿಗಬಹುದೆಂಬ ದುರಾಸೆ ಅವರಿಗಿದೆ. ಯಾವ ಕಾರಣಕ್ಕೂ ನೀವು ಮಂತ್ರಿಯಾಗುವುದಿಲ್ಲವೆಂದು ವ್ಯಂಗ್ಯವಾಡಿದರು.

ಬಿಳಿಚೌಡಯ್ಯನವರಿಗೆ ಪರಿಷತ್ ಸ್ಥಾನ ನೀಡಲಿಲ್ಲವೆಂದು ಜೆಡಿಎಸ್ ತೊರೆದೆನೆಂದು ಹೇಳುತ್ತೀರಿ. ಅವರಿಗೆ ಸೂಕ್ತ ಹುದ್ದೆ ನೀಡುವ ಉದ್ದೇಶದಿಂದಲೇ ಬೆಂಗಳೂರಿನ ನಿವಾಸಕ್ಕೆ ಮಾಜಿ ಪ್ರಧಾನಿ ದೇವೇಗೌಡರು ನಿಮ್ಮನ್ನು ಆಹ್ವಾನಿಸಿದ್ದರು. ಎರಡು ಗಂಟೆ ಕಾದು ಕುಳಿತರೂ ಬರಲಿಲ್ಲ. ಆಗಲೇ ಹಿಂದುಳಿದ ವರ್ಗದವರಿಗೆ ಅನ್ಯಾಯವಾಗಬೇಕೆಂದು ಬಯಸಿದ್ದು ಯಾರೆಂಬುದು ಅರ್ಥವಾಯಿತು. ಪ್ರತಿ ಭಾಷಣದಲ್ಲಿ ಅಹಿಂದ ಕುರಿತು ಮೃದುವಾಗಿ ಮಾತನಾಡುತ್ತೀರಿ. ಹಿಂದುಳಿದ ಸಮುದಾಯಕ್ಕೆ ಎಷ್ಟು ಕೊಡುಗೆ ನೀಡಿದ್ದೀರಿ. ಪಟೇಲ್ ಶಿವಪ್ಪ ಅವರಿಗೆ ಹುಡಾ ಅಧ್ಯಕ್ಷ ಸ್ಥಾನ ತಪ್ಪಿಸಲು ಎಷ್ಟು ಪ್ರಯತ್ನ ನಡೆಸಿದ್ದರೆಂಬುದು ತಾಲ್ಲೂಕಿನ ಜನರಿಗೆ ಗೊತ್ತು. ಶಿವಪ್ಪ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಆಪ್ತರಾಗಿರುವುದರಿಂದ ಹೇಗೋ ಅಧಿಕಾರ ಸಿಕ್ಕಿದೆ. ನಿಮ್ಮನ್ನು ನಂಬಿದರೆ ಏನೂ ಆಗುವುದಿಲ್ಲವೆಂದು ವಾಗ್ದಾಳಿ ನಡೆಸಿದರು.

2008ರಲ್ಲಿ ಜೆಡಿಎಸ್‌ನಿಂದ ಟಿಕೆಟ್ ಕೇಳುವವರು ಯಾರೂ ಇರಲಿಲ್ಲ ಎಂದಿದ್ದೀರಿ. 1994ರಲ್ಲಿ ಪರಮೇಶ್ವರಪ್ಪ, ನಂತರ ಗಂಗಾಧರಪ್ಪ ಜೆಡಿಎಸ್‌ನಿಂದಲೇ ಗೆದ್ದಿದ್ದರು ಎಂಬುದನ್ನು ಮರೆಯಬಾರದು. ಅರಸೀಕೆರೆ ಯಾವತ್ತಿಗೂ ಜೆಡಿಎಸ್ ಭದ್ರಕೋಟೆ. 2019ರ ಲೋಕಸಭಾ ಚುನಾವಣೆಯಲ್ಲಿ ಮಾಜಿ ಸಂಸದ ಪ್ರಜ್ವಲ್ ರೇವಣ್ಣಗೆ 85 ಸಾವಿರ ಮತ ಬಂದಿದ್ದವು. 2024ರಲ್ಲಿ 84 ಸಾವಿರ ಮತಗಳು ಜೆಡಿಎಸ್‌ಗೆ ದೊರೆತಿವೆ. ನೀವು ಪಕ್ಷ ತೊರೆದರೂ ಜೆಡಿಎಸ್ ಮತಗಳು ಬದಲಾಗಿಲ್ಲ. ನಿಮ್ಮ ಯಾವ ಮಾತನ್ನು ಜನರು ನಂಬುವುದಿಲ್ಲವೆಂದು ತಿರುಗೇಟು ನೀಡಿದರು.

ಅರಸೀಕೆರೆ ನಗರಸಭೆ ಮಾಜಿ ಅಧ್ಯಕ್ಷ ಗಿರೀಶ್ ಮಾತನಾಡಿ, 2007ರಲ್ಲಿ ನಗರದ ತಮ್ಮಯ್ಯ ಶೆಟ್ಟಿ ಅವರ ಮನೆಗೆ ಹೆಚ್.ಡಿ.ರೇವಣ್ಣ ಅವರು ಬಂದಿದ್ದಾಗ ಶಿವಲಿಂಗೇಗೌಡ ಕಾಲಿಗೆ ಬಿದ್ದು ಆಶೀರ್ವಾದ ಪಡೆದಿದ್ದರು. ಇತಿಹಾಸ ಮರೆತು ಬಾಯಿಗೆ ಬಂದಂತೆ ಮಾತನಾಡುತ್ತಿದ್ದಾರೆ. ಅಧಿಕಾರ ಯಾರಿಗೂ ಶಾಶ್ವತವಲ್ಲ. ಗೌರವ, ಸಂಯಮ ಹಾಗೂ ಮಾನವೀಯತೆ ಗುಣಗಳನ್ನು ಮನುಷ್ಯ ಅಳವಡಿಸಿಕೊಳ್ಳಬೇಕು. ಕೃತಜ್ಞತೆ ಇಲ್ಲದ ಶಾಸಕರಿಗೆ 2028ರ ಚುನಾವಣೆಯಲ್ಲಿ ಪಾಠ ಕಲಿಸುತ್ತೇವೆಂದರು.

ಜೆಡಿಎಸ್ ಮುಖಂಡರಾದ ಶೇಖರಪ್ಪ, ಹೊಸೂರು ಗಂಗಣ್ಣ, ಗಂಡಸಿ ಮಾಯಣ್ಣ, ಕೆಂಕೆರೆ ಕೇಶವ, ಹರ್ಷವರ್ಧನ್ ಇತರರಿದ್ದರು.

# ಪ್ರತ್ಯೇಕ ಟ್ರ್ಯಾಕ್ಟರ್ ಅವಘಡ: ಇಬ್ಬರ ಸಾವು

ಹಾಸನ: ದುದ್ದ ಹಾಗೂ ಚನ್ನರಾಯಪಟ್ಟಣ ಠಾಣೆ ವ್ಯಾಪ್ತಿಯಲ್ಲಿ ನಡೆದ ಪ್ರತ್ಯೇಕ ಅಪಘಾತದಲ್ಲಿ ಇಬ್ಬರು ಮೃತಪಟ್ಟಿದ್ದಾರೆ.

ದುದ್ದ ಹೋಬಳಿ ಕೆ.ಹೊನ್ನೇನಹಳ್ಳಿ ಗ್ರಾಮದ ಇಂದ್ರೇಶ್ ಮೃತರು. ಗ್ರಾಮದ ಕೆರೆಯಿಂದ ಮಣ್ಣು ತುಂಬಿಕೊಂಡು ಜಮೀನಿಗೆ ತೆರಳುತ್ತಿದ್ದಾಗ ನಿಯಂತ್ರಣ ತಪ್ಪಿ ಇಂಜಿನ್ ಮೈ ಮೇಲೆದ್ದು ಆಯತಪ್ಪಿ ಇಂದ್ರೇಶ್ ಅವರು ಟ್ರೈಲರ್ ಮತ್ತು ಇಂಜಿನ್ ನಡುವೆ ಸಿಲುಕಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ದುದ್ದ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮತ್ತೊಂದು ಪ್ರಕರಣದಲ್ಲಿ ವಿದ್ಯುತ್ ಕಂಬಕ್ಕೆ ಟ್ರ್ಯಾಕ್ಟರ್ ಡಿಕ್ಕಿಯಾಗಿ ಚಾಲಕ ಮೃತಪಟ್ಟಿರುವ ಘಟನೆ ಚನ್ನರಾಯಪಟ್ಟಣ ತಾಲ್ಲೂಕು ನಂದಿಪುರ ಸಮೀಪ ನಡೆದಿದೆ.

ಗೂರಮಾರನಹಳ್ಳಿ ಗ್ರಾಮದ ಸೈಯದ್ ಬಷೀರ್ ಮೃತರು.

ಬೋಡ್ರಸ್ ಕಲ್ಲುಗಳನ್ನು ತುಂಬಿಸಿಕೊಂಡು ನಂದಿಪುರ ಗ್ರಾಮದಲ್ಲಿ ಅನ್ ಲೋಡ್ ಮಾಡಿ ವಾಪಾಸ್ ಚನ್ನರಾಯಪಟ್ಟಣಕ್ಕೆ ಬರುತ್ತಿದ್ದಾಗ ವೇಗವಾಗಿ ಚಲಾಯಿಸಿದ್ದರಿಂದ ನಿಯಂತ್ರಣ ತಪ್ಪಿ ಟ್ರ್ಯಾಕ್ಟರ್ ರಸ್ತೆ ಬದಿಯ ವಿದ್ಯುತ್ ಕಂಬಕ್ಕೆ ಡಿಕ್ಕಿಯಾಗಿದೆ. ಗಂಭೀರ ಗಾಯಗೊಂಡಿದ್ದ ಅವರನ್ನು ಆಸ್ಪತ್ರೆಗೆ ದಾಖಲಿಸಲಾಯಿತಾದರೂ ಮಾರ್ಗಮಧ್ಯೆಯೇ ಮೃತಪಟ್ಟಿದ್ದಾರೆಂದು ವೈದ್ಯರು ತಿಳಿಸಿದರು. ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ದೇವಾಲಯದಲ್ಲಿ ಹುಂಡಿ ಕಳವು

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಅರಸೀಕೆರೆ: ದೇವಸ್ಥಾನದ ಬಾಗಿಲು ಮುರಿದಿರುವ ಕಳ್ಳರು ಹುಂಡಿ ಹೊಡೆದು ನಗದು ಕದ್ದಿರುವ ಘಟನೆ ತಾಲ್ಲೂಕಿನ ಮಾದನಹಳ್ಳಿ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ಹರಿಹರೇಶ್ವರ ಹಾಗೂ ರಾಮ-ಲಕ್ಷ್ಮಣ ದೇವಾಲಯದಲ್ಲಿ ಕಳ್ಳತನವಾಗಿದೆ. ಅರ್ಚಕ ಉಮಾಮಹೇಶ್ವರಿ ಅವರು ಜ. 11ರಂದು ಪೂಜೆ ಮುಗಿಸಿ ಬಾಗಿಲು ಹಾಕಿ ಮನೆಗೆ ತೆರಳಿದ್ದರು. ಮಾರನೇ ದಿನ ಬೆಳಿಗ್ಗೆ 5 ಗಂಟೆಗೆ ದೇವಸ್ಥಾನದ ಬಳಿ ಹೋದಾಗ ಬಾಗಿಲು ಮುರಿದಿರುವುದು ಗೊತ್ತಾಗಿದೆ. ಹುಂಡಿ ಒಡೆದಿರುವ ಕಳ್ಳರು ಅಂದಾಜು 3 ಸಾವಿರ ರೂ. ನಗದು ಕದ್ದಿದ್ದಾರೆ. ಜಾವಗಲ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ನಟ ಯಶ್ ತಾಯಿ ಪುಷ್ಪಾ ಅಕ್ರಮ ನಿವೇಶನ ಖರೀದಿಸಿದ್ದಾರೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್




ಹಾಸನ: ನಟ ಯಶ್ ಅವರ ತಾಯಿ ಪುಷ್ಪಾ ವಿದ್ಯಾ ನಗರದಲ್ಲಿ ಅಕ್ರಮ ನಿವೇಶನ ಖರೀದಿಸಿ ಮೊಸಕ್ಕೊಳಗಾಗಿ ಈಗ ತಮ್ಮ ಮೇಲೆ ಇಲ್ಲಸಲ್ಲದ ಆರೋಪ ಮಾಡುತ್ತಿದ್ದಾರೆಂದು ವಿವಾದಿತ ಸ್ಥಳದ ಜಿಪಿಎ ಹೋಲ್ಡರ್ ದೇವರಾಜು ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 1965ರಿಂದ ಇಲ್ಲಿವರೆಗೆ ಎಲ್ಲಾ ದಾಖಲೆಗಳು ನಮ್ಮ ಬಳಿಯಿವೆ. ಸಿ.ಜೆ.ವೀಣಾ ಎಂಬುವವರಿಂದ ನಿವೇಶನ ಖರೀದಿಸಿದ ಪುಷ್ಪಾ ಮೂಲ ದಾಖಲೆಗಳನ್ನು ಪರಿಶೀಲಿಸಲಿಲ್ಲ. ವೀಣಾ ಯಾರಿಂದ ಜಾಗ ಖರೀದಿಸಿದರು ಮತ್ತು ಅದು ಚರಾಸ್ತಿಯೋ ಅಥವಾ ಸ್ಥಿರಾಸ್ತಿಯೇ ಎಂಬುದನ್ನು ಅರಿಯಬೇಕಿತ್ತು. ಬೇರೆ ಯಾರಿಂದಲೋ ಅನ್ಯಾಯಕ್ಕೊಳಗಾಗಿ ನಮ್ಮ ಮೇಲೆ ಗೂಬೆ ಕೂರಿಸುತ್ತಿದ್ದಾರೆ ಎಂದರು.

ಒಟ್ಟು 10 ಗುಂಟೆ ಜಮೀನಿನಲ್ಲಿ 5 ಗುಂಟೆ ಲಕ್ಷ್ಮಮ್ಮ ಎಂಬುವವರಿಗೆ ಸೇರಿದೆ. ಮೂಲ ಖಾತೆದಾರರಾದ ಕರೀಗೌಡ ಅವರಿಂದ 1965ರ ಜೂ. 19ರಂದು 5 ಗುಂಟೆ ಜಾಗ ರಾಮಕೃಷ್ಣ ಎಂಬುವವರಿಗೆ ಖಾತೆಯಾಗಿತ್ತು. ನಂತರ ರಾಮಕೃಷ್ಣ ಅವರು ತಮ್ಮ ತಂದೆ ಚಿಕ್ಕೇಗೌಡರಿಗೆ ಮಾರಾಟ ಮಾಡಿದ್ದರು. ಈ ವೇಳೆ ಬೋಗಸ್ ವಿಸ್ತೀರ್ಣ ನಮೂದಿಸಿದ್ದು ಇಷ್ಟೆಲ್ಲ ಸಮಸ್ಯೆಗೆ ಅದುವೇ ಕಾರಣ. ಚಿಕ್ಕೇಗೌಡರಿಂದ 1978ರಲ್ಲಿ ಡಾ.ಕೆ. ರಾಮಭಟ್ಟ, ಈರೇಗೌಡ ಹಾಗು ರುದ್ರೇಗೌಡರ ಹೆಸರಿಗೆ ಖಾತೆಯಾಗಿದೆ. ನಂತರದಲ್ಲಿ ಚಿಕ್ಕೇಗೌಡರಿಂದ 1982ರಲ್ಲಿ ಪಿ.ಮಲ್ಲೇಶ್ ಅವರಿಂದ ಗಿರೀಶ್ ಮಹಲಿಂಗಪ್ಪಗೆ, ನಂತರದಲ್ಲಿ ಸಿ.ಜೆ. ವೀಣಾ ಅವರಿಂದ ಯಶ್ ತಾಯಿ ಪುಷ್ಪ ಅರುಣ್‌ಕುಮಾರ್‌ಗೆ ಮಾರಾಟವಾಗಿದೆ ಎಂದರು.

ರಾಮಕೃಷ್ಣ ಹಾಗೂ ಅವರ ತಂದೆ ಚಿಕ್ಕೇಗೌಡ ಬೋಗಸ್ ವಿಸ್ತೀರ್ಣವನ್ನು ನಮೂದಿಸಿ ನೋಂದಣಿ ಮಾಡಿಸಿದ್ದಾರೆ. ಅದ್ಯಾವುದನ್ನು ಪರಿಶೀಲಿಸದೆ ಸಿ.ಜೆ. ವೀಣಾ ಖರೀದಿಸಿದ್ದರು. ಪುಷ್ಪಾ ಸಹ ಅದೇ ತಪ್ಪು ಮಾಡಿದ್ದಾರೆಂದು ಆರೋಪಿಸಿದರು.

ಆ ಜಾಗವು ತಮ್ಮದೆಂದು ವಾದಿಸುತ್ತಿರುವ ಪುಷ್ಪಾ ಸರಿಯಾಗಿ ದಾಖಲಾತಿಗಳನ್ನು ಪರಿಶೀಲಿಸಬೇಕಿತ್ತು. ಈ ಸಂಬಂಧ ನಾವು ಪುಷ್ಪಾ ಅರುಣ್ ಕುಮಾರ್ ಅವರಿಗೆ ಸಾಕಷ್ಟು ಸಲ ತಿಳಿ ಹೇಳಿದರೂ ಕೇಳಲಿಲ್ಲ. ಲಕ್ಷ್ಮಮ್ಮ ಅವರು ಮೈಸೂರಿನಲ್ಲಿ ಶಿಕ್ಷಕರಾಗಿ ನಿವೃತ್ತರಾಗಿದ್ದಾರೆ. ಅವರ ಪುತ್ರ ವಿದೇಶದಲ್ಲಿದ್ದಾರೆ. ನಮ್ಮ ತಂದೆಯೂ ಶಿಕ್ಷಕರಾಗಿದ್ದರಿಂದ ನನ್ನ ಮೇಲೆ ವಿಶ್ವಾಸವಿಟ್ಟು ಜಾಗವನ್ನು ನನಗೆ 2020ರಲ್ಲಿ ಜಿಪಿಎ ಮಾಡಿದ್ದಾರೆ. ಈ ಅವ್ಯವಹಾರದಲ್ಲಿ ತೆರಿಗೆ ಇಲಾಖೆ ನೌಕರ ನಟರಾಜ್ ಎಂಬುವವನು ಸೇರಿಕೊಂಡಿದ್ದಾನೆ. ಜೊತೆಗೆ ಪುಷ್ಪಾ ಅವರ ಸಂಬಂಧಿ ದುರ್ಗಾ ಪ್ರಸಾದ್‌ನದ್ದೂ ಕೈವಾಡ ಇದೆಯೆಂದು ಆರೋಪಿಸಿದರು.

ಜಾಗ ನಮಗೆ ಸೇರಿದೆ ಎಂದು ನ್ಯಾಯಾಲಯ ಆದೇಶ ಮಾಡಿದ ಬಳಿಕವೇ ಕಾಂಪೌಂಡ್ ತೆರವುಗೊಳಿಸಿ ನಾಮಫಲಕ ಅಳವಡಿಸಿದ್ದೇವೆ. ನಟ ಯಶ್ ಅವರ ಮೇಲೆ ನಮಗೆ ಅಪಾರ ಗೌರವವಿದೆ. ಯಾರದೋ ಮಾತು ಕೇಳಿ ನಟನ ಹೆಸರಿಗೆ ಕಳಂಕ ತರಬೇಡಿ ಎಂದು ಪುಷ್ಪಾ ಅರುಣ್‌ಕುಮಾರ್ ಅವರಿಗೆ ಸಲಹೆ ನೀಡಿದರು.

ಆ ಜಾಗ ತಮ್ಮದಲ್ಲ ಎನ್ನುವುದು ದಾಖಲೆಗಳ ಸಮೇತ ಸಾಬೀತಾದರೆ ನಾನು ಆ ಕಡೆ ಬರುವುದಿಲ್ಲವೆಂದು ಪುಷ್ಪಾ ಅವರು ನನಗೆ ಖುದ್ದಾಗಿ ಹೇಳಿದ್ದಾರೆ. ಈಗ ಉಲ್ಟಾ ಹೊಡೆಯುತ್ತಿದ್ದಾರೆಂದರು.

ದಾಖಲೆಗಳಿಲ್ಲದೆ ಇಲ್ಲಸಲ್ಲದ ಆರೋಪ ಮಾಡಿ ನಮ್ಮ ವಿರುದ್ಧ ಎಫ್ಐಆರ್ ದಾಖಲಿಸಿದ್ದಾರೆ. ಅವರಿಂದ ತೊಂದರೆಯಾಗುತ್ತಿದೆಯೆಂದು ನಾವು ದೂರು ನೀಡಿದರೆ ಪೊಲೀಸರು ಇನ್ನೂ ಎಫ್ಐಆರ್ ದಾಖಲಿಸಿಲ್ಲ. ಅವರು ಪ್ರಭಾವಿಗಳು ಎಂಬ ಕಾರಣಕ್ಕೆ ನಮ್ಮ ದೂರನ್ನು ಗಂಭೀರವಾಗಿ ಪರಿಗಣಿಸುತ್ತಿಲ್ಲವೆಂದು ಅಳಲು ತೋಡಿಕೊಂಡರು.

ಸುದ್ದಿಗೋಷ್ಠಿಯಲ್ಲಿ ದೇವರಾಜೇಗೌಡ ಸಂಬಂಧಿ ದಿಲೀಪ್, ಕುಮಾರ್, ತುಳಸಿರಾಮ್, ಸುಶೀಲೇಗೌಡ, ಶೇಖರ್ ಇತರರು

# ಮೆಕ್ಕೆಜೋಳ ಖರೀದಿ: ರೈತರ ಹಿತಾಸಕ್ತಿ ಮರೆತ ಸರ್ಕಾರ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಮಾರುಕಟ್ಟೆ ಮಧ್ಯ ಪ್ರವೇಶ ಯೋಜನೆಯಡಿ ಮೆಕ್ಕೆಜೋಳಕ್ಕೆ ಪ್ರೋತ್ಸಾಹ ಧನದಡಿ ಖರೀದಿಗೆ ಚಾಲನೆ ನೀಡಲಾಗಿದೆಯಾದರೂ ರೈತರಿಗೆ ವರದಾನಕ್ಕಿಂತ ಮಾರಕವಾಗಿ ಪರಿಣಮಿಸಿದೆ.

ಇದು ಒಂದು ರೀತಿಯಲ್ಲಿ ರೈತರಿಗೆ ಸುಣ್ಣ ವರ್ತಕರಿಗೆ ಬೆಣ್ಣೆ ಎಂಬಂತಾಗಿದೆ.



ಮಾರುಕಟ್ಟೆ ಬೆಲೆಗೆ ಅನುಗುಣವಾಗಿ ಪ್ರತಿ ಕ್ವಿಂಟಾಲ್‌ಗೆ 250 ರೂ. ಪ್ರೋತ್ಸಾಹ ಧನ ನೀಡಲಾಗುತ್ತಿದೆಯಾದರೂ ಪ್ರಕ್ರಿಯೆಗಳು ರೈತರನ್ನು ಹೈರಾಣಾಗಿಸುತ್ತಿವೆ. ಹೀಗಾಗಿ ಜಿಲ್ಲೆಯ ಬಹುತೇಕ ರೈತರು ಎಪಿಎಂಸಿ ಸಹವಾಸ ಬೇಡವೆಂದು ವರ್ತಕರಿಗೆ ಜೋಳ ಮಾರಾಟ ಮಾಡಿ ಸುಮ್ಮನಾಗುತ್ತಿದ್ದಾರೆ.

ಕೆಎಂಎಫ್‌ನಿಂದ 10 ಸಾವಿರ ಮೆಟ್ರಿಕ್ ಟನ್ ಮೆಕ್ಕೆಜೋಳವನ್ನು ಪ್ರತಿ ಕ್ವಿಂಟಾಲ್‌ಗೆ 2,400 ರೂ.ನಂತೆ ಖರೀದಿಸಲಾಗಿದೆ. ಮಾರಾಟಕ್ಕೆ ಸಿದ್ಧವಾಗಿರುವ ಮೆಕ್ಕೆಜೋಳ ಸಾಕಷ್ಟು ಪ್ರಮಾಣದಲ್ಲಿರುವುದರಿಂದ ಬೆಳೆ ವ್ಯತ್ಯಾಸ ಪಾವತಿ ಯೋಜನೆಯಡಿ ಖರೀದಿಸಬೇಕೆಂಬ ಆಗ್ರಹ ಕೇಳಿಬಂದಿತ್ತು. ಅದಕ್ಕೆ ವಿಧಿಸುವ ಮಾನದಂಡಗಳು ತಲೆ ಕೆಡಿಸುತ್ತಿವೆ.

ರೈತರು ತಮ್ಮ ಆಧಾರ್ ಅಥವಾ ಫ್ರೂಟ್ಸ್ ಐಡಿ ಜೊತೆಗೆ ಹತ್ತಿರದ ಎಪಿಎಂಸಿಗಳಲ್ಲಿ ನೋಂದಣಿ ಮಾಡಿಸಬೇಕು. ಒಂದು ಪಹಣಿಯಲ್ಲಿ ಪ್ರತಿ ಎಕರೆಗೆ ಕನಿಷ್ಟ 12 ರಿಂದ ಗರಿಷ್ಟ 50 ಕ್ವಿಂಟಾಲ್ ವರೆಗೆ ಮಾರಾಟ ಮಾಡಬಹುದು. 50 ಕ್ವಿಂಟಾಲ್‌ಗೆ ನೊಂದಾಯಿಸಬೇಕಾದರೆ ಪಹಣಿಯಲ್ಲಿ 4 ಎಕರೆ ಇರಬೇಕು. ಮೆಕ್ಕೆಜೋಳವನ್ನು ತುಂಬಿದ ವಾಹನದ ಜೊತೆ ರೈತನೇ ಎಪಿಎಂಸಿಗೆ ತೆರಳಿ ಗೇಟ್‌ನಲ್ಲಿ ಜಿಪಿಎಸ್ ಫೋಟೋ ತೆಗೆಸಬೇಕು. ನಂತರ ವರ್ತಕರಿಗೆ ಜೋಳ ಮಾರಾಟ ಮಾಡಿ ಅವರಿಂದ ಮಾರುಕಟ್ಟೆ ಬೆಲೆ ಪಡೆದು ಉಳಿದ 250 ರೂ.ಗಾಗಿ ಆಧಾರ್ ಕಾರ್ಡ್, ವರ್ತಕರು ನೀಡಿದ ಬಿಲ್, ಫ್ರೂಟ್ಸ್ ಐಡಿ ಸಂಖ್ಯೆ, ಬ್ಯಾಂಕ್ ಖಾತೆ ಸಂಖ್ಯೆಯನ್ನು ಎಪಿಎಂಸಿಗೆ ಸಲ್ಲಿಸಬೇಕು.

ಪ್ರತಿ ರೈತನಿಗೆ ಒಂದು ಎಕರೆಗೆ 12 ಕ್ವಿಂಟಾಲ್ ಮಾತ್ರ ನಿಗದಿ ಮಾಡಲಾಗಿದೆ. ಹೆಚ್ಚುವರಿ ಜೋಳವಿದ್ದರೆ ಅದನ್ನುವರ್ತಕರು ಖರೀದಿಸುತ್ತಾರೆ ಆದರೆ ಅದಕ್ಕೆ ಪ್ರೋತ್ಸಾಹ ಧನ ಸಿಗುವುದಿಲ್ಲ. ರೈತ ಒಕ್ಕಣೆ ಮಾಡಿದ ಜೋಳವನ್ನು ಚೀಲಕ್ಕೆ ತುಂಬಿ ಮಾರುಕಟ್ಟೆಗೆ ತಲುಪಿಸುವ ವೇಳೆಗೆ ಕ್ವಿಂಟಾಲ್‌ಗೆ 200 ರಿಂದ 300 ರೂ. ಖರ್ಚಾಗುತ್ತದೆ. ಸರ್ಕಾರ ನೀಡುವ ಪ್ರೋತ್ಸಾಹ ಧನಕ್ಕೆ ಆಸೆಪಟ್ಟರೆ 100 ರೂ. ನಷ್ಟವಾಗುತ್ತದೆ. ಖಾಲಿ ಚೀಲ ಮತ್ತು ಗುಣಮಟ್ಟದ ನೆಪದಲ್ಲಿ ಕತ್ತರಿ ಹಾಕುವುದರಿಂದ ರೈತರಿಗೆ ಅನ್ಯಾಯವಾಗುತ್ತದೆ. ಮಾರುಕಟ್ಟೆಯಲ್ಲಿ ಪ್ರಸ್ತುತ 1,900 ರೂ. ಬೆಲೆ ಇದ್ದು ಮಾರನೇ ದಿನ ಎಷ್ಟಿರುತ್ತದೆಂಬುದು ಗೊತ್ತಾಗುವುದಿಲ್ಲ.

ಬೆಳೆ ವ್ಯತ್ಯಾಸ ಪಾವತಿ ಯೋಜನೆಯಡಿ ಮೆಕ್ಕೆಜೋಳ ಖರೀದಿಸುತ್ತಿರುವ ಸರ್ಕಾರ ಅನ್ನದಾತರಿಗೆ ನಿಯಮ ವಿಧಿಸಿದೆ ಹೊರತು ವರ್ತಕರಿಗೆ ಯಾವುದೇ ನಿರ್ದೇಶನ ನೀಡಿಲ್ಲ. ಮಾರುಕಟ್ಟೆ ತಲುಪಿದ ಸಮಯದಲ್ಲಿ ವರ್ತಕರು ಇರುತ್ತಾರೆ ಅಥವಾ ಇರುವುದಿಲ್ಲ. ವ್ಯಾಪಾರ ಇಲ್ಲದಿದ್ದರೆ ವರ್ತಕರು ಬರುವ ವರೆಗೆ ಕಾಯಬೇಕು. ಇಡೀ ದಿನ ವರ್ತಕರು ಬಾರದೆ ಇದ್ದರೆ ತಂದ ಸರಕನ್ನು ಬಾಡಿಗೆ ವಾಹನದಲ್ಲಿ ವಾಪಾಸ್ ತೆಗೆದುಕೊಂಡು ಹೋಗಬೇಕಾದ ಪರಿಸ್ಥಿತಿ ಇದೆ.

> ಕೆಎಂಎಫ್‌ಗೆ ಮೆಕ್ಕೆಜೋಳ ಮಾರಾಟ ಮಾಡಿದ ರೈತರು ಬೆಳೆ ವ್ಯತ್ಯಾಸ ಪಾವತಿ ಯೋಜನೆಯಡಿ ಮಾರಾಟ ಮಾಡಬಾರದು. ಕೆಎಂಎಫ್‌ನಿಂದ ಹಣ ಪಾವತಿಯಾಗದ ಹಿನ್ನಲೆಯಲ್ಲಿ ಅಂತವರು ಇಲ್ಲಿಯೂ ನೋಂದಣಿ ಮಾಡಿಕೊಳ್ಳುತ್ತಿದ್ದಾರೆ. ಎರಡೂ ಕಡೆ ಮಾರಾಟ ಮಾಡುವವರಿಗೆ ಪ್ರೋತ್ಸಾಹಧನ ಸಿಗುವುದಿಲ್ಲ.
>
> **- ಮಧು,**
> **ಎಪಿಎಂಸಿ ಕಾರ್ಯದರ್ಶಿ, ಹಾಸನ**

# ಸಂಸ್ಕೃತಿ, ಪ್ರಕೃತಿ, ವಿಜ್ಞಾನ ಸಂಕ್ರಾಂತಿ



**- ಅಂತೋಣಿ ಮುತ್ತು ವಿ,**
**ಶಿಕ್ಷಕರು (ಮೊ.ನಂ. 9449376695)**

ಮಕರ ಸಂಕ್ರಾಂತಿ ಭಾರತೀಯ ಸಂಸ್ಕೃತಿಯಲ್ಲಿನ ಅತ್ಯಂತ ಮಹತ್ವದ ಹಾಗೂ ಅರ್ಥಪೂರ್ಣ ಹಬ್ಬವಾಗಿದ್ದು, ಧಾರ್ಮಿಕ ನಂಬಿಕೆ, ವೈಜ್ಞಾನಿಕ ಸತ್ಯ ಮತ್ತು ಸಾಮಾಜಿಕ ಮೌಲ್ಯಗಳ ಅಪೂರ್ವ ಸಂಗಮವಾಗಿದೆ. ಸೂರ್ಯನು ಧನು ರಾಶಿಯಿಂದ ಮಕರ ರಾಶಿಗೆ ಪ್ರವೇಶಿಸುವ ಈ ದಿನವನ್ನು ಸಂಕ್ರಾಂತಿ ಎಂದು ಆಚರಿಸಲಾಗುತ್ತದೆ.

ಸಾಮಾನ್ಯವಾಗಿ ಜನವರಿ 14 ಅಥವಾ 15ರಂದು ಬರುವ ಈ ಹಬ್ಬವು ಸೂರ್ಯನ ಉತ್ತರಾಯಣ ಪ್ರಾರಂಭದ ಸಂಕೇತವಾಗಿದ್ದು, ಭಾರತೀಯ ಪರಂಪರೆಯಲ್ಲಿ ಉತ್ತರಾಯಣವನ್ನು ಶುಭಕಾಲ, ಬೆಳಕು ಮತ್ತು ಶಕ್ತಿಯ ಪ್ರತೀಕವೆಂದು ಪರಿಗಣಿಸಲಾಗಿದೆ. ಚಳಿಗಾಲ ನಿಧಾನವಾಗಿ ಕಡಿಮೆಯಾಗುತ್ತಾ ದಿನಗಳು ದೀರ್ಘವಾಗುವ ಈ ಅವಧಿ ಪ್ರಕೃತಿಗೆ ಹೊಸ ಚೈತನ್ಯ ನೀಡುವಂತೆ ಮಾನವ ಜೀವನದಲ್ಲೂ ಹೊಸ ಆಶೆ ಮತ್ತು ಉತ್ಸಾಹವನ್ನು ತುಂಬುತ್ತದೆ. ಕೃಷಿ ಪ್ರಧಾನ ಭಾರತದಲ್ಲಿ ಮಕರ ಸಂಕ್ರಾಂತಿ ಕೊಯ್ಲಿನ ಹಬ್ಬವಾಗಿದ್ದು, ರೈತರು ತಮ್ಮ ಶ್ರಮದ ಫಲವಾಗಿ ಬಂದ ಧಾನ್ಯ ಮತ್ತು ಬೆಳೆಗಳಿಗೆ ಭೂಮಿ, ಸೂರ್ಯ ಮತ್ತು ಪ್ರಕೃತಿಗೆ ಕೃತಜ್ಞತೆ ಸಲ್ಲಿಸುವ ದಿನವಾಗಿದೆ.

ಸಂಕ್ರಾಂತಿಯ ಪ್ರಮುಖ ಸಂಪ್ರದಾಯವಾದ ಎಳ್ಳು-ಬೆಲ್ಲ ಹಂಚುವ ಪದ್ಧತಿ ಜೀವನದ ಆಳವಾದ ತತ್ತ್ವವನ್ನು ಸಾರುತ್ತದೆ ಎಳ್ಳಿನ ಕಹಿತನ ಮತ್ತು ಬೆಲ್ಲದ ಸಿಹಿತನ ಜೀವನದ ನೋವು ಮತ್ತು ನಲಿವಿನ ಸಂಕೇತವಾಗಿದ್ದು, ಎಳ್ಳು-ಬೆಲ್ಲ ತಿನ್ನಿ, ಒಳ್ಳೆ ಮಾತಾಡಿಟಿ ಎಂಬ ಸಂದೇಶದ ಮೂಲಕ ಸಮಾಜದಲ್ಲಿ ಸೌಹಾರ್ದತೆ, ಸಹಬಾಳ್ವೆ ಮತ್ತು ಮಧುರ ಸಂಬಂಧಗಳನ್ನು ಬೆಳೆಸುವಂತೆ ಪ್ರೇರೇಪಿಸುತ್ತದೆ. ಗ್ರಾಮೀಣ ಪ್ರದೇಶಗಳಲ್ಲಿ ಎತ್ತುಗಳ ಅಲಂಕಾರ, ಹಬ್ಬದ ಹಾಡು-ನೃತ್ಯಗಳು ಸಂಕ್ರಾಂತಿಯ ಸಂಭ್ರಮವನ್ನು ಹೆಚ್ಚಿಸಿದರೆ, ನಗರಗಳಲ್ಲಿ ಕುಟುಂಬ ಸಮಾವೇಶ, ಸಂಪ್ರದಾಯಬದ್ಧ ಆಹಾರ ಮತ್ತು ದಾನಧರ್ಮಗಳು ಹಬ್ಬದ ಆತ್ಮವನ್ನು ಜೀವಂತವಾಗಿರಿಸುತ್ತವೆ. ಇಂದಿನ ತಂತ್ರಜ್ಞಾನಾಧಾರಿತ ಮತ್ತು ವೇಗದ ಜೀವನದಲ್ಲಿ ಮಕರ ಸಂಕ್ರಾಂತಿ ನಮಗೆ ಪ್ರಕೃತಿಯೊಂದಿಗೆ ಮರುಸಂಪರ್ಕ ಸಾಧಿಸುವ, ಪರಿಸರ ಸಂರಕ್ಷಣೆ ಮತ್ತು ರೈತರ ಶ್ರಮಕ್ಕೆ ಗೌರವ ಸಲ್ಲಿಸುವ ಅಮೂಲ್ಯ ಸಂದೇಶವನ್ನು ನೀಡುತ್ತದೆ. ಸೂರ್ಯನಂತೆ ನಮ್ಮ ಬದುಕು ಕೂಡ ಸಮಾಜಕ್ಕೆ ಬೆಳಕು, ಉಷ್ಣತೆ ಮತ್ತು ಸಕಾರಾತ್ಮಕತೆಯನ್ನು ಹಂಚಲಿ ಎಂಬ ಆಶಯದೊಂದಿಗೆ ಮಕರ ಸಂಕ್ರಾಂತಿ ಹೊಸ ಆರಂಭ ಮತ್ತು ಉತ್ತಮ ಭವಿಷ್ಯದ ಸಂಕೇತವಾಗಿ ನಿಲ್ಲುತ್ತದೆ.

# ಕಾಡಾನೆ ದಾಳಿಗೆ ಬಲಿಯಾದ ಮಹಿಳೆ ಕುಟುಂಬಸ್ಥರಿಗೆ ಸಂಸದರ ಸಾಂತ್ವನ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಕಾಡಾನೆ ದಾಳಿಗೆ ಬಲಿಯಾದ ಸಕಲೇಶಪುರ ತಾಲ್ಲೂಕಿನ ಬೆಳಗೋಡು ಗ್ರಾಮ ಪಂಚಾಯಿತಿ

ಮಾಜಿ ಅಧ್ಯಕ್ಷೆ ರಾಜಮ್ಮ ಅವರ ಪುತ್ರಿ ಶೋಭಾ ಅವರ ನಿಧನಕ್ಕೆ ಸಂಸದ ಶ್ರೇಯಸ್ ಪಟೇಲ್ ಸಂತಾಪ ಸೂಚಿಸಿದರು.

ತಾಲ್ಲೂಕಿನ ಕಟ್ಟಾಯ ಹೋಬಳಿಯ ಸತ್ತಿಗರಹಳ್ಳಿ ಗ್ರಾಮದಲ್ಲಿ ಬುಧವಾರ ಶೋಭಾ ಅವರ ಪಾರ್ಥಿವ ಶರೀರಕ್ಕೆ ಅಂತಿಮ ನಮನ ಸಲ್ಲಿಸಿದರು.



ಈ ಸಂದರ್ಭದಲ್ಲಿ ಶೋಭಾ ಅವರ ಪತಿ ನಾಗರಾಜ್ ಮತ್ತು ತಾಯಿ ರಾಜಮ್ಮ ಅವರಿಗೆ ಸಾಂತ್ವನ ಹೇಳಿದ ಸಂಸದರು, ವೈಯಕ್ತಿಕವಾಗಿ 50,000 ರೂ. ಆರ್ಥಿಕ ನೆರವು ನೀಡಿದರು.

ಮೃತರ ಕುಟುಂಬಕ್ಕೆ ಈ ನೋವನ್ನು ಭರಿಸುವ ಶಕ್ತಿ ಸಿಗಲಿ ಎಂದು ಆಶಿಸಿದ ಅವರು, ಸರ್ಕಾರದಿಂದ ಸಿಗಬೇಕಾದ ಗರಿಷ್ಠ ಪರಿಹಾರ ಮೊತ್ತವನ್ನು ಅರಣ್ಯ ಇಲಾಖೆಯಿಂದ ಶೀಘ್ರವಾಗಿ ಕೊಡಿಸುವ ಭರವಸೆ ನೀಡಿದರು.

ಕಾಡಾನೆ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳುವ ಬಗ್ಗೆ ಸರ್ಕಾರದ ಮಟ್ಟದಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ಈ ವೇಳೆ ಅವರು ಗ್ರಾಮಸ್ಥರಿಗೆ ಭರವಸೆ ನೀಡಿದರು.

# ಇತಿಹಾಸದಲ್ಲಿ ಈ ದಿನ

## ಜನವರಿ-15

1949: ಭಾರತೀಯ ಸೇನೆಯ ಪ್ರಥಮ ಮುಖ್ಯಸ್ಥರಾಗಿ ಫೀಲ್ಡ್ ಮಾರ್ಷಲ್ ಕೆ.ಎಂ. ಕರಿಯಪ್ಪ ಅವರು ಅಧಿಕಾರ ಸ್ವೀಕರಿಸಿದರು.

1950: ಭಾರತದಲ್ಲಿ ಸೇನಾ ದಿನ ಆಚರಣೆಗೆ ಜನವರಿ 15ನ್ನು ಅಧಿಕೃತವಾಗಿ ನಿಗದಿಪಡಿಸಲಾಯಿತು.

1967: ನೈಜೀರಿಯಾದಲ್ಲಿ ಬಿಯಾಫ್ರಾ ಪ್ರತ್ಯೇಕ ರಾಷ್ಟ್ರ ಘೋಷಣೆ ನಂತರ ಗೃಹಯುದ್ಧ ಆರಂಭವಾಯಿತು.

2001: ವಿಕಿಪೀಡಿಯಾ ಅಧಿಕೃತವಾಗಿ ಪ್ರಾರಂಭವಾಯಿತು, ಜ್ಞಾನ ಹಂಚಿಕೆಯ ಹೊಸ ಯುಗಕ್ಕೆ ನಾಂದಿ.

### ಜನನ

1899: ಫೀಲ್ಡ್ ಮಾರ್ಷಲ್ ಕೆ.ಎಂ. ಕರಿಯಪ್ಪ, ಭಾರತೀಯ ಸೇನೆಯ ಪ್ರಥಮ ಕಮಾಂಡರ್ ಇನ್ ಚೀಫ್

1929: ಮಾರ್ಟಿನ್ ಲೂಥರ್ ಕಿಂಗ್ ಜೂನಿಯರ್, ಅಮೆರಿಕದ ಖ್ಯಾತ ನಾಗರಿಕ ಹಕ್ಕು ಹೋರಾಟಗಾರ

### ಮರಣ

1990: ಪಿ.ಎನ್. ಭಾಗವತಿ, ಭಾರತದ ಮಾಜಿ ಮುಖ್ಯ ನ್ಯಾಯಮೂರ್ತಿ




# ಆಸ್ತಿಗಾಗಿ ಹೆಣ್ಣು ಮಕ್ಕಳಿಂದ ಬೇಡಿಕೆ: ವ್ಯಕ್ತಿ ನೇಣಿಗೆ ಶರಣು

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಆಸ್ತಿಯಲ್ಲಿ ಪಾಲು ಬೇಕೆಂದು ತಂದೆಯ ಸಹೋದರಿಯರು ನ್ಯಾಯಾಲಯ ಮೆಟ್ಟಿಲೇರಿದ್ದರಿಂದ ಹಾಗೂ ದಾರಿಯಲ್ಲಿ ಸಿಕ್ಕಾಗ ಅವಾಚ್ಯ ಪದಗಳಿಂದ ನಿಂದಿಸುತ್ತಿದ್ದರಿಂದ ಮನನೊಂದ ವ್ಯಕ್ತಿ ನೇಣಿಗೆ ಶರಣಾಗಿರುವ ಘಟನೆ ತಾಲ್ಲೂಕಿನ ಗಾಣಿಗರಹೊಸಹಳ್ಳಿ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ರಘು ಮೃತರು. ತಂದೆ ತಮ್ಮಯ್ಯನವರಿಗೆ ಪಿತ್ರಾರ್ಜಿತವಾಗಿ ಬಂದಿದ್ದ 4 ಎಕರೆ ಜಮೀನಿದೆ. ಅದರಲ್ಲಿ ತಮಗೂ ಪಾಲು ನೀಡಬೇಕೆಂದು ತಂದೆಯ ಸಹೋದರಿಯರ ಮಕ್ಕಳು ನ್ಯಾಯಾಲಯ ಮೆಟ್ಟಿಲೇರಿದ್ದರು. ಕಳೆದ ನಾಲ್ಕು ವರ್ಷಗಳಿಂದ ವಿಚಾರಣೆಗೆ ಹಾಜರಾಗುತ್ತಿದ್ದ ರಘು ಮಾನಸಿಕವಾಗಿ ನೊಂದಿದ್ದರು. ಜ. 11ರ ರಾತ್ರಿ ಅದೇ ಬೇಜಾರಿನಿಂದ ಊಟ ಮಾಡಿ ಮಲಗಿದ್ದ ರಘು ಬೆಳಿಗ್ಗೆ ಜಮೀನು ಕೆಲಸಕ್ಕೆ ಹೋಗುತ್ತೇನೆ ಎಂದು ತೆರಳಿದ್ದರು. ಎಷ್ಟೇ ಹೊತ್ತಾದರೂ ವಾಪಾಸ್ ಬಾರದ ಹಿನ್ನೆಲೆಯಲ್ಲಿ ಕುಟುಂಬಸ್ಥರು ಜಮೀನು ಕಡೆಗೆ ಹೋಗಿ ನೋಡಿದಾಗ ಪಕ್ಕದ ಮಂಜೇಗೌಡ ಅವರ ಹೊಲದಲ್ಲಿದ್ದ ಹಲಸಿನ ಮರಕ್ಕೆ ನೇಣಿಗೆ ಶರಣಾಗಿರುವುದು ಗೊತ್ತಾಗಿದೆ. ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248